ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ, ಯಾವುದೋ ಒಂದು ಕಂಪನಿಯವರ ಜೊತೆಗೆ ಒಪ್ಪಂದ ಮಾಡಿಕೊಂಡು ಇಂಥ ಕಂಪೆನಿಯ ಪಂಪ್‌ಸೆಟ್ಟುಗಳನ್ನು ತೆಗೆದುಕೊಳ್ಳಬೇಕು ಎಂದು ನಿಯಮಿಸಿದ್ದಾರೆ ಎಂದು ತಿಳಿದುಬಂದಿದೆ ಇದು ನಿಜವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—That question does not arise.

ಶ್ರೀ ಸಿ. ಬೈರೇಗೌಡ.—ಅನೇಕ ಕಡೆ ಕುಡಿಯುವ ನೀರಿನ ಬಾವಿಗಳಿಲ್ಲ ಎಂದೂ ಗೊತ್ತಾಗಿದೆ. ಅಂಥ ಹಳ್ಳಿಗಳಲ್ಲಿ ಬೋರ್‌ವೆಲ್ಸ್ ಪ್ರೊವೈಡ್ ಮಾಡುವುದರಿಂದ ಬಹಳ ಅನುಕೂಲವಿದೆ. ಆದುದರಿಂದ ಅಂಥ ಹಳ್ಳಿಗಳಲ್ಲಿ ಬೋರ್ ವೆಲ್ಸ್‌ಗಳನ್ನು ಪ್ರೊವೈಡ್ ಮಾಡಿ, ಹ್ಯಾಂಡ್ ಪಂಪ್ಸ್ ಬದಲಿಗೆ ನಲ್ಲಿಗಳನ್ನು ಹಾಕುವುದಕ್ಕೆ ಏರ್ಪಾಟು ಮಾಡುತ್ತೀರಾ ?

Sri D. DEVARAJ URS.—That is a good suggestion. Wherever possible, we will put up borewells.

ಶ್ರೀ ಶರಣಪ್ಪ.—ಪಂಪ್ ಸೆಟ್ಟುಗಳನ್ನು ಮತ್ತು ಬೋರ್ ವೆಲ್‌ಗಳನ್ನು ಪಂಚಾಯತಿ ಹಣದಿಂದರಾಗಲೀ, ಸರ್ಕಾರಿ ಹಣದಿಂದರಾಗಲೀ ಏರ್ಪಡಿಸಿದ್ದೀರಾ ಅಥವಾ ಇವುಗಳಿಗೆ ಪಬ್ಲಿಕ್ ಕಂಟ್ರಿಬ್ಯೂಷನ್ ಏನಾದರೂ ಇದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈ ಪ್ರಶ್ನೆ ಉದ್ಭವಿಸುವುದಿಲ್ಲ.

MADAM SPEAKER.—Now the Questions are over.

QUESTION FOR ANSWER ON THE DAY

(but not taken up)

Establishment of Industries in Yelburga Taluk

92. Sri PRABHURAJ PATIL (Yelburga).—

Will the Minister for Industries be pleased to state :—

the types of industries that could be established in the different parts of Yelburga Taluk of Raichur District in view of the availability of raw materials and other facilities (Details to be given with reasons) ?

Sri S. M. KRISHNA (Minister for Industries).—

There is a good scope for starting Small Scale units for the manufacture of agricultural implements and also a small mechanised bakery unit in Yelburga Taluk.

Admitting Certain Notices from the Members

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ನಾನು ನಿನ್ನೆಯ ದಿವಸ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಕಾಲೇಜು ಶಿಕ್ಷಕರು ಪ್ರಜಾ ಚಳುವಳಿಯನ್ನು ಮಾಡಿದ ಬಗ್ಗೆ ತಮ್ಮ ಗಮನವನ್ನು ಸೆಳೆಯುವ ಒಂದು ನೂಚನೆಯನ್ನು ಕಳುಹಿಸಿದ್ದೇನೆ, ಅದನ್ನು ಚರ್ಚೆಗೆ ಇವತ್ತು ತೆಗೆದುಕೊಳ್ಳುತ್ತೀವೆ ಎಂದು ಹೇಳಿದ್ದೀರಿ.

ಅಧ್ಯಕ್ಷರು.—ನೋಟೀಸ್ ಬಂದಿದೆ, ತೆಗೆದುಕೊಳ್ಳೋಣ.